## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
## ದಕ್ಷಿಣ ಕನ್ನಡ, ಮಂಗಳೂರು

## ಸ್ಪೆಷಲ್ ಕೇಸ್ ನಂಬ್ರ 184/2021

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಘವೇಂದ್ರ | ಫ್ರಾಸಾಃ 6 |
| ತಂದೆಯ ಹೆಸರು | : | ಗ್ಯಾನಪ್ಪ | ಚಾಸಾಃ 8 |
| ಪ್ರಾಯ | : | 28 ವರ್ಷ | ದಿನಾಂಕಃ 06.11.2024 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪೊಲೀಸ್ ಪೇದೆ, ಕಂಕನಾಡಿ ನಗರ ಪೊಲೀಸ್ ಠಾಣೆ | |
| ವಾಸಸ್ಥಳ | : | ಮಂಗಳೂರು | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಆಗಸ್ಟ್2022ರಿಂದ 04.07.2023 ರವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2) 07.09.2020ರಂದು ಮಧ್ಯಾಹ್ನ 3.15 ಗಂಟೆಗೆ ಇನ್ಸೆಕ್ಟರ್ ನನ್ನನ್ನು, ಪಿಎಸ್ಐ ಹಾಗೂ ಇತರ ಸಿಬ್ಬಂದಿಗಳನ್ನು ಕರೆದು ಮಂಗಳೂರು ತೊಕ್ಕೊಟ್ಟು ಕಡೆಯಿಂದ ಶಿವಭಾಗ್ ಕಡೆಗೆ ಒಂದು ಕಪ್ಪು ಬಣ್ಣದ ಸ್ಕೂಟರ್ ನಲ್ಲಿ ಗಾಂಜಾ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ಆ ಸಮಯದಲ್ಲಿ ಪತ್ರಾಂಕಿತ ಅಧಿಕಾರಿಯವರನ್ನು ಠಾಣೆಗೆ ಕರೆಯಿಸಿಕೊಂಡು ಅವರ ಸಮಕ್ಷಮದಲ್ಲಿ 03.15ರಿಂದ 03.30ಗಂಟೆಯವರೆಗೆ ಅಂಗಶೋಧನೆ ಮಹಜರ್ ನಡೆಸಿದ್ದು ಅದಕ್ಕೆ ನಾನು ಸಹಿ

ಮಾಡಿರುತ್ತೇನೆ. ಈಗ ನೋಡಿದ ಮಹಜರ್ ನಲ್ಲಿರುವ ಸಹಿ ನನ್ನದು ಇದೆ. ಮಹಜರನ್ನು ನಿಪಿ–10 ಎಂದು ಸಾಕ್ಷಿಯ ಸಹಿಯನ್ನು ನಿಪಿ–10(ಎ) ಎಂದು ಗುರುತಿಸಲಾಯಿತು.

3) ಠಾಣೆಯಿಂದ ಸ್ಥಳಕ್ಕೆ ತೆರಳಲು ಪೊಲೀಸ್ ಇನ್ಸ್ಪೆಕ್ಟರ್ ಕೆಎ–19–ಜಿ–0387, ಕೆಎ–19–ಜಿ–0757 ವಾಹನದಲ್ಲಿ ತನಿಖಾ ಸಲಕರಣೆಗಳನ್ನು ಹಾಗೂ ತೂಕ ಮಾಪನವನ್ನು ತೆಗೆದುಕೊಂಡು ಮಾಹಿತಿ ಬಂದ ಸ್ಥಳವಾದ ಶಿವಭಾಗ್‌ನ 5ನೇ ಕ್ರಾಸಿಗೆ 3.50 ಗಂಟೆಗೆ ತಲುಪಿರುತ್ತೇವೆ. ಮಾಹಿತಿ ಬಂದ ಸ್ಕೂಟರ್ ಗೆ ಕಾಯುತ್ತಿರುವ ಸಮಯ 04.05 ಗಂಟೆಗೆ ಕೆಎ–19–ಇಝಡ್–2912 ಸಂಖ್ಯೆಯ ಸ್ಕೂಟರ್ ಬರುತ್ತಿರುವುದನ್ನು ಪೊಲೀಸ್ ಇನ್ಸ್ಪೆಕ್ಟರ್ ನೋಡಿ ಅದನ್ನು ನಿಲ್ಲಿಸುವಂತೆ ಸೂಚನೆ ನೀಡಿದರು. ಅದರಂತೆ ಸಮವಸ್ತ್ರದಲ್ಲಿದ್ದ ನಾವು ಸ್ಕೂಟರ್ ನಿಲ್ಲಿಸುವಂತೆ ಸೂಚಿಸಿದಾಗ ಆತನು ನಿಲ್ಲಿಸದೇ ಪರಾರಿಯಾಗಲು ಪ್ರಯತ್ನಿಸಿದಾಗ ಆಯ ತಪ್ಪಿ ಸ್ಕೂಟರ್ ನಿಂದ ಕೆಳಗೆ ಬಿದ್ದು ಸ್ಕೂಟರ್ ನ ಕಾಲು ಇಡುವ ಸ್ಥಳದಲ್ಲಿದ್ದ ಪಾಲಿಥೀನ್ ಚೀಲವನ್ನು ಹಿಡಿದುಕೊಂಡು ಓಡಿ ಹೋಗಲು ಪ್ರಯತ್ನಿಸಿದವನನ್ನು ನಾನು ಬೆನ್ನಟ್ಟಿ ಹಿಡಿದಿರುತ್ತೇನೆ. ನಂತರ ಇನ್ಸ್ಪೆಕ್ಟರ್ ಹಾಗೂ ಸಿಬ್ಬಂದಿಗಳು ಅವನನ್ನು ವಶಕ್ಕೆ ಪಡೆದಿರುತ್ತಾರೆ. ಅವನನ್ನು ಇನ್ಸ್ಪೆಕ್ಟರ್ ಕೂಲಂಕುಷವಾಗಿ ವಿಚಾರಣೆ ಮಾಡಿದಾಗ ಅವನ ಹೆಸರು ಮೊಹಮ್ಮದ್ ಶೇಖ್ ಅಫ್ರೀದ್ ಎಂದು ತಿಳಿಸಿರುತ್ತಾನೆ. ಆತನ ಕೈಯಲ್ಲಿದ್ದ ಪಾಲಿಥೀನ್ ಚೀಲದ ಬಗ್ಗೆ ವಿಚಾರಣೆ ಮಾಡಿದಾಗ ಆತನ ಅಸಮರ್ಪಕವಾಗಿ ಉತ್ತರ ನೀಡಿರುತ್ತಾನೆ. ನಂತರ ಆ

ಚೀಲದಲ್ಲಿ ಗಾಂಜಾದ ಕಟ್ಟು ಇರುವುದಾಗಿ ತಿಳಿಸಿರುತ್ತಾನೆ.

4) ನಂತರ ಇನ್ಸ್‌ಪೆಕ್ಟರ್ ಅವನನ್ನು ನಿನ್ನ ಅಂಗಶೋಧನೆಯನ್ನು ಪತ್ರಾಂಕಿತ ಅಧಿಕಾರಿ ಮಾಡಬೇಕೇ ಅಥವಾ ನಾನೇ ಮಾಡಬೇಕೇ ಎಂದು ಕೇಳಿರುತ್ತಾನೆ. ಆ ಸಮಯದಲ್ಲಿ ಅವನು ಪತ್ರಾಂಕಿತ ಅಧಿಕಾರಿ ಮಾಡಬೇಕೆಂದು ತಿಳಿಸಿರುತ್ತಾನೆ. ಸ್ಥಳದಲ್ಲಿ ಇದ್ದ ಪತ್ರಾಂಕಿತ ಅಧಿಕಾರಿ ಜಗದೀಶ್ ಇವರು ಗುರುತಿನ ಚೀಟಿ ತೋರಿಸಿ ನಾನು ಪತ್ರಾಂಕಿತ ಅಧಿಕಾರಿ ಎಂದು ತಿಳಿಸಿರುತ್ತಾರೆ. ಆತನ ಕೈಯಲ್ಲಿದ್ದ ಪಾಲಿಥೀನ್ ಚೀಲದ ಬ್ಯಾಗ್ ವಿಚಾರಣೆ ಮಾಡಿದಾಗ ಅದರಲ್ಲಿ ಒಂದು ಗಾಂಜಾ ಕಟ್ಟು ಇರುವುದಾಗಿ ತಿಳಿಸಿ ಅದನ್ನು ಹಾಜರು ಪಡಿಸಿದ್ದು ಅದನ್ನು ಇನ್ಸ್‌ಪೆಕ್ಟರ್ ಮತ್ತು ಪತ್ರಾಂಕಿತ ಅಧಿಕಾರಿ ನೋಡಿದಾಗ ಅದು ಕಾಕಿ ಬಣ್ಣದ ಟೇಪ್ ನಿಂದ ಸುತ್ತಿರುತ್ತದೆ. ಅದನ್ನು ತೆರೆದು ನೋಡಿದಾಗ ಅದರಲ್ಲಿ ಗಾಂಜಾದ ಎಲೆ, ಬೀಜ ಇರುತ್ತದೆ. ಅದನ್ನು ಪತ್ರಾಂಕಿತ ಅಧಿಕಾರಿ ಹಾಗೂ ಪಂಚರ ಸಮಕ್ಷಮದಲ್ಲಿ ಠಾಣೆಯಿಂದ ತಂದಿದ್ದ ತೂಕ ಮಾಪನದಲ್ಲಿ ತೂಕ ಮಾಡಿದ್ದು ಅದು 2.200 ಕೆಜಿ ಗಾಂಜಾ ಇರುತ್ತದೆ. ಅದನ್ನು ಸ್ಥಳದಲ್ಲಿ ಬಿಳಿ ಬಟ್ಟೆಯಿಂದ ಹೊಲಿದು, ಪ್ಯಾಕ್ ಮಾಡಿ, E ಎಂಬ ಅರಗು ಸೀಲ್ ಹಾಕಿ ಪತ್ರಾಂಕಿತ ಅಧಿಕಾರಿ, ಇನ್ಸ್‌ಪೆಕ್ಟರ್ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ A ಎಂದು ಗುರುತು ನೀಡಿರುತ್ತಾರೆ. ಮುಂದುವರೆದು ಹಳದಿ ಬಣ್ಣದ ಪಾಲಿಥೀನ್ ಚೀಲವನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಆತನಲ್ಲಿದ್ದ ಕಪ್ಪು ಬಣ್ಣದ ವಿವೊ ಮೊಬೈಲ್ ಫೋನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಮಾದಕ ವಸ್ತು ಸಾಗಾಟ ಮಾಡಲು ಉಪಯೋಗಿಸಿದ

ಕೆಎ-19-ಇಝಡ್-2912 ಕಪ್ಪು ಬಣ್ಣದ ಸ್ಕೂಟರನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಸ್ಥಳದಲ್ಲಿ ಪೊಲೀಸ್ ಇನ್ಸೆಕ್ಟರ್ ಸವಿತ್ರ ತೇಜ ಇವರ ಉಕ್ತಲೇಖನದಂತೆ ನಾನು ಮಹಜರನ್ನು ಬರೆದಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಈಗ ನೋಡಿದ ಮಹಜರ್ ನಲ್ಲಿರುವ (ನಿಪಿ-2) ಸಹಿ ನನ್ನದು ಇದೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

5) ಮಹಜರ್ ಮಾಡಿದ ನಂತರ ಅವನನ್ನು ಠಾಣೆಗೆ ಕರೆದುಕೊಂಡು ಬಂದರು. ನಂತರ ಆರೋಪಿತನ ಫೋಟೋ ಮತ್ತು ಸ್ಕೂಟರ್ ನ ಫೋಟೋ ತೆಗೆದು ಪ್ರಿಂಟ್ ಮಾಡಿ ಸಿಡಿಯಲ್ಲಿ ಹಾಕಿ ಕೊಡುವಂತೆ ಹೇಳಿದ್ದು ನಾನು ಫೋಟೋ ತೆಗೆದು ಪ್ರಿಂಟ್ ಮಾಡಿ ಸಿಡಿಯಲ್ಲಿ ಹಾಕಿ ಇನ್ಸೆಕ್ಟರ್ ಸವಿತ್ರ ತೇಜ್ ಇವರಿಗೆ ಕೊಟ್ಟಿರುತ್ತೇನೆ. ಈ ಬಗ್ಗೆ ಕಲಂ 65ಬಿ ಸರ್ಟಿಫಿಕೇಟ್ ನೀಡಿರುತ್ತೇನೆ. ಈಗ ನೋಡಿದ ಸರ್ಟಿಫಿಕೇಟನ್ನು ನಾನು ನೀಡಿರುತ್ತೇನೆ. ಅದನ್ನು ನಿಪಿ-11 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

6) 07.11.2020ರಂದು 6ನೇ ಜೆ.ಎಂ.ಎಫ್.ಸಿ. ನ್ಯಾಯಾಲಯದ ಮುಂದೆ ಇನ್ವೆಂಟರಿ ಮಾಡುವ ಸಮಯ ಫೋಟೋ ತೆಗೆಯುವಂತೆ ಇನ್ಸೆಕ್ಟರ್ ಹೇಳಿದಂತೆ ಠಾಣೆಯ Sony Cybershot ಕ್ಯಾಮೆರಾದಲ್ಲಿ ಫೋಟೋ ತೆಗೆದಿರುತ್ತೇನೆ. ಅದನ್ನು ಪ್ರಿಂಟ್ ಮಾಡಿ ಸಿಡಿಗೆ ಹಾಕಿ ಇನ್ಸೆಕ್ಟರ್ ಮುಂದೆ ಹಾಜರು ಪಡಿಸಿರುತ್ತೇನೆ. ಈ ಬಗ್ಗೆ ಕಲಂ 65ಬಿ ಸರ್ಟಿಫಿಕೇಟ್ ನೀಡಿರುತ್ತೇನೆ. ಈ ಕೇಸಿನಲ್ಲಿ ಫೋಟೋಗಳೊಂದಿಗೆ ಸಿಡಿ

ಹಾಜರು ಪಡಿಸಿರುವುದಿಲ್ಲ. ಈಗ ನೋಡಿದ ಸರ್ಟಿಫಿಕೇಟನ್ನು ನಾನು ನೀಡಿರುತ್ತೇನೆ. ಅದನ್ನು ನಿಪಿ–12 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಅಮಾನತುಪಡಿಸಿದ ಹಾಗೂ ಇನ್ವೆಂಟರಿ ಸಮಯದಲ್ಲಿ ತೆಗೆದ ಗಾಂಜಾವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡಿದ ಗಾಂಜಾ ಪ್ಯಾಕೆಟನ್ನು (ಮುಮಾ–3) ಇನ್ವೆಂಟರಿ ಸಮಯದಲ್ಲಿ ನೋಡಿದ್ದೇನೆ. ಈಗ ನೋಡಿದ ಪಾಲಿಥೀನ್ ಚೀಲ (ಮುಮಾ–2) ಆ ದಿನ ನೋಡಿದ್ದೇನೆ. ಈಗ ನೋಡಿದ ವಸ್ತು ಕಪ್ಪು ಬಣ್ಣದ ವಿವೊ ಮೊಬೈಲ್ ಇರುತ್ತದೆ. ಸೀಲ್ ಮಾಡಿದ ಪ್ಯಾಕ್ ಮಾಡಿದ ಪ್ಯಾಕೆಟನ್ನು ತೆರೆಯದೇ ಅದನ್ನು ಮೊಬೈಲ್ ಎಂದು ಸಾಕ್ಷಿ ಹೇಳಿದ್ದು ಇದೆ. ಸದರಿ ಪ್ಯಾಕೆಟನ್ನು ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿ ಒಂದು ಮೊಬೈಲ್ ಇರುತ್ತದೆ. ಸದರಿ ಮೊಬೈಲನ್ನು ಈಗಾಗಲೇ ಮುಮಾ–1 ಎಂದು ಗುರುತಿಸಲಾಗಿದೆ. ಈಗ ನೋಡಿದ ಫೋಟೋ (ನಿಪಿ–3) ದಲ್ಲಿ ಕಾಣುವ ವಾಹನವನ್ನು ವಶಪಡಿಸಿಕೊಂಡಿದ್ದು ಇದೆ. ನ್ಯಾಯಾಲಯದಲ್ಲಿರುವ ಆರೋಪಿಯನ್ನು ನಾನು ಅಲ್ಲಿ ನೋಡಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಐ.ಎಸ್., ವಕೀಲರಿಂದಃ

7) ಎಸಿಪಿಯ ಅಂಗಶೋಧನೆಯನ್ನು ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶಿವಭಾಗ್ 5ನೇ ಕ್ರಾಸ್ ಅಂದರೆ ಒಳರಸ್ತೆ. ಮೊಬೈಲ್‌ನ್ನು ಪೌಚ್ ನಲ್ಲಿ

ಇಡಲಾಗಿತ್ತೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅದು ಯಾವ ಮೋಡೆಲ್ ಮೊಬೈಲ್ ಎಂದು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಬೀಜ ಮತ್ತು ಎಲೆ ಇರುವುದನ್ನು ನಮೂದಿಸಲಾಗಿದೆ. ಅದು ಹಸಿಯಾಗಿತ್ತೋ ಅಥವಾ ಒಣಗಿತ್ತೋ ಅನ್ನುವುದನ್ನು ನಾನು ನೋಡಿಲ್ಲ. ಮಹಜರ್ ನಲ್ಲಿ ಗಾಂಜಾಕ್ಕೆ ಸಂಬಂಧಿಸಿದ ವಿವರಣೆ ಇರುವುದಿಲ್ಲ.

8) ವಾಹನದ ಫೋಟೋವನ್ನು ಠಾಣೆಯಲ್ಲಿ ತೆಗೆದಿದ್ದೇನೆ. ಆ ದಿನ ಘಟನಾ ಸ್ಥಳದಿಂದ ಸಾಯಂಕಾಲ 6.30ರ ನಂತರ ಠಾಣೆಗೆ ಬಂದಿರಬಹುದು. ನಾನು ಫೋಟೋ ತೆಗೆದಾಗ ಸಂಜೆ ಆಗಿತ್ತು ಮತ್ತು ಬೆಳಕು ಇತ್ತು. ಸೆಪ್ಟೆಂಬರ್ ತಿಂಗಳಲ್ಲಿ ಸಾಯಂಕಾಲ 06.15ಕ್ಕೆ ಕತ್ತಲು ಆವರಿಸುತ್ತದೆ ಅಂದರೆ ಅದು ನನಗೆ ಗೊತ್ತಿಲ್ಲ. ಫೋಟೋಗಳನ್ನು ನಾರ್ಮಲ್ ಪ್ರಿಂಟರ್ ನಲ್ಲಿ ಪ್ರಿಂಟ್ ತೆಗೆಯಲಾಗಿದೆ. ಪ್ರಿಂಟ್ ತೆಗೆಯಲು ಬಳಸಿದ ಎಷ್ಟು GSM ಪೇಪರ್ ಎಂದು ನನಗೆ ಹೇಳಲಾಗುವುದಿಲ್ಲ. ಪ್ರಿಂಟ್ ತೆಗೆಯಲು ಪೇಪರನ್ನು ಯಾರು ತಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವ ಪೇಪರನ್ನು ಪ್ರಿಂಟ್ ತೆಗೆಯಲು ಉಪಯೋಗಿಸಿದ್ದೇನೆ ಎಂದು ಹೇಳಲಾಗುವುದಿಲ್ಲ. ಸೋನಿ ಸೈಬರ್ ಶಾಟ್ ಕ್ಯಾಮೆರಾದಲ್ಲಿ ಫೋಟೋ ತೆಗೆದಾಗ ದಿನಾಂಕ ಮತ್ತು ಸಮಯ ದಾಖಲಾಗುತ್ತದೆ ಅನ್ನುವುದು ನಿಜ. ನಾನು ತೆಗೆದ ಫೋಟೋದಲ್ಲಿ ದಿನಾಂಕ ಮತ್ತು ಸಮಯ ನಮೂದಾಗಿಲ್ಲ. ಈ ಕೇಸಿನಲ್ಲಿ ಹಾಜರು ಪಡಿಸಿರುವ ಫೋಟೋಗಳನ್ನು ನಂತರದಲ್ಲಿ ಎಡಿಟ್ ಮಾಡಿ ಸೇರಿಸಲಾಗಿದೆ ಅಂದರೆ ಅದು ಸರಿಯಲ್ಲ. ನಾನು ತಕ್ಷೀರು ಸ್ಥಳಕ್ಕೆ ಹೋಗಿಲ್ಲ, ನನ್ನ ಸಮಕ್ಷಮ ಆರೋಪಿಯನ್ನು

ವಶಕ್ಕೆ ಪಡೆದುಕೊಂಡಿಲ್ಲ ಎಂದು ಹೇಳುವುದು ಸರಿಯಲ್ಲ. ಠಾಣೆಯಲ್ಲಿ ಸಿದ್ಧಪಡಿಸಿರುವ ಮಹಜರ್ ಗೆ ನಾನು ಸಹಿ ಮಾಡಿದ್ದೇನೆ ಅನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.